ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

2019ರ KPTCL ನೇಮಕಾತಿಯ ಬಗ್ಗೆ

ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-

374 (481) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮಂಡಳಿಯು 2019ರ ಫೆಬ್ರುವರಿ 20 ರಂದು ಖಾಲಿಯಿದ್ದ AEE,AE,JE,JPA,JA ಸೇರಿದಂತೆ ಒಟ್ಟು 3646 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ 2 ವರ್ಷಗಳೇ ಕಳೆದರು ಕೂಡ ನೇಮಕಾತಿ ಪ್ರಕ್ರಿಯೆ ನಡೆಸದೇ ಇರಲು ಕಾರಣವೇನು;

(ಆ) ಅಲ್ಲದೇ ಹಠಾತ್ತನೆ ದಿನಾಂಕ:21-ನವೆಂಬರ್-2020 ರಂದು ಈ ಹುದ್ದೆಗಳ ನೇಮಕಾತಿಯನ್ನು ಕೆಲವು ಆಡಳಿತಾತ್ಮಕ ಕಾರಣವನ್ನು ನೀಡಿ ರದ್ದುಗೊಳಿಸಲು ಕಾರಣವೇನು;

(ಇ) ಇನ್ನುಳಿದ ಇಲಾಖೆಗಳ ನೇಮಕಾತಿಗಳು ನಡೆಯುತ್ತಿದ್ದರೂ ಕೂಡ ಕೇವಲ ಈ ಇಲಾಖೆಯ ನೇಮಕಾತಿಯನ್ನು ಮಾತ್ರ ತಡೆಹಿಡಿದು ರದ್ದುಗೊಳಿಸಲು ಕಾರಣವೇನು;

(ಈ) ಅಲ್ಲದೇ ರಾಜ್ಯದ ಲಕ್ಷಾಂತರ ಅಭ್ಯರ್ಥಿಗಳು ಈ ಇಲಾಖೆಯ ಬೇರೆ ಬೇರೆ ಹುದ್ದೆಗಳಿಗೆ ಪ್ರತ್ಯೇಕವಾಗಿ 500 ರೂ ನಂತೆ ಪರೀಕ್ಷಾ ಶುಲ್ಕವನ್ನು ಭರಿಸಿದ್ದು, ಇದನ್ನು ಸರ್ಕಾರ ಮರುಪಾವತಿ ಮಾಡುತ್ತದೆಯೆ ; ಮರುಪಾವತಿ ಮಾಡುತ್ತೀರಿ ಎಂದಾದಲ್ಲಿ, ಹೇಗೆ ಮತ್ತು ಯಾವಾಗ ಮರುಪಾವತಿಸಲಾಗುವುದು ? (ವಿವರ ನೀಡುವುದು)